ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೬೯೯ (೨೧೨೨)

ಸದಸ್ಯರ ಹೆಸರು : ಶ್ರೀ ಶಂಕರರೆಡ್ಡಿ ಎನ್.ಹೆಚ್ (ಗೌರಿಬಿದನೂರು)

ಉತ್ತರಿಸುವ ಸಚಿವರು : ಶ್ರೀ ಬಾಲಚಂದ್ರ ಲ.ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಸರ್ಕಾರವು ಪರಿಶಿಷ್ಟ ಜಾತಿ ಪರಿಶಿಷ್ಟ ಜತಿ ಪರಿಶಿಷ್ಟ ಪಂಗಡಗಳವರ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಯೋಜನೆಯ ಕಾರ್ಯಕ್ರಮದ ಅಂಶಗಳೇನು? (ವಿವರ ಒದಗಿಸುವುದು)	೧. ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮವು ಪರಿಶಿಷ್ಟ ಜತಿ ಮತ್ತು ಪರಿಶಿಷ್ಟ ವರ್ಗದವರ ಆರ್ಥಿಕ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ೧. ಸ್ವಯಂ ಉದ್ಯೋಗ ಯೋಜನೆ : ಅ. ಸ್ವಯಂ. ಉದ್ಯೋಗ ಯೋಜನೆ ಆ. ಐ.ಎಸ್. ಬಿ ಯೋಜನೆ ಇ. ನೇರ ಸಾಲ ಯೋಜನೆ ಈ. ತರಬೇತಿ ಯೋಜನೆ ೨. ಮೈಕ್ರೋ ಕ್ರೆಡಿಟ್ ಯೋಜನೆ ೩. ಭೂ – ಒಡೆತನ ಯೋಜನೆ ೪. ಗಂಗಾ ಕಲ್ಯಾಣ ಯೋಜನೆ ಅ. ಸಾಮೂಹಿಕ/ಏತ – ನೀರಾವರಿ ಯೋಜನೆ ಆ. ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ ೫. ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ ಯೋಜನೆಯ ವಿವರಗಳನ್ನು ಅನುಬಂಧ–೧ರಲ್ಲಿ ನೀಡಲಾಗಿದೆ. ೨. ಸಮಾಜ ಕಲ್ಯಾಣ ಇಲಾಖೆಯ

		ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಆರ್ಥಿಕ ಅಭಿವೃದ್ಧಿಗಾಗಿ ಕೈಗೊಂಡ ಯೋಜನೆಗಳನ್ನು ಅನುಬಂಧ–೧(ಎ) ರಲ್ಲಿ ನೀಡಲಾಗಿದೆ. ೩. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಪರಿಶಿಷ್ಟ ವರ್ಗಗಳ ಆರ್ಥಿಕ ಅಭಿವೃದ್ಧಿಗಾಗಿ ಕೈಗೊಂಡ ಯೋಜನೆಗಳನ್ನು ಅನುಬಂಧ–೧ (ಬಿ) ರಲ್ಲಿ ನೀಡಲಾಗಿದೆ.
ಆ)	ಜನಾಂಗದವರಿಗೆ ಸರ್ಕಾರದಿಂದ ಸಿಗುತ್ತಿರುವ ಸೌಲಭ್ಯಗಳಾವುವು ? (ವಿವರ ಒದಗಿಸುವುದು)	ವಿವರಗಳನ್ನು ಅನುಬಂಧ–೧ ೧(ಬಿ) ಮತ್ತು ೨ (ಎ) ರಲ್ಲಿ ನೀಡಲಾಗಿದೆ.
ಇ)	ಈ ಯೋಜನೆಗಳನ್ನು ಜಾರಿಗೆ ತರುವಲ್ಲಿ ಸರ್ಕಾರಿ ಅಧಕಾರಿಗಳು ನಿರ್ಲಕ್ಷ ತೋರುತ್ತಿರುವುದರಿಂದ ಈ ಜನಾಂಗದ ಜನತೆಯು ಕಂಗಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಇಲ್ಲ
ಈ)	ಈ ಜನಾಂಗದವರ ಏಳಿಗೆಗೆ ಯಾವುದೇ ತೊಂದರೆಯಾಗದಂತೆ ಸಕಾಲದಲ್ಲಿ ಯೋಜನೆಗಳು ಜನರ ಕೈಗೆ ತಲುಪಲು ಸರ್ಕಾರವು ಕೈಗೊಂಡಿರುವ ಕ್ರಮವೇನು?	ಪರಿಶಿಷ್ಟ ಜಾತಿ ಜನಾಂಗದ ಏಳಿಗೆಗೆ ಸಕಾಲದಲ್ಲಿ ಯೋಜನೆಗಳು ಕೈಗೆಟಕುವಂತಾಗಲು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾ ಪಂಚಾಯತ್ಗಳು, ತಾಲ್ಲೂಕು ಪಂಚಾಯತ್ ಗಳು ಕಾಲಕಾಲಕ್ಕೆ ಕ್ರಮ ಕೈಗೊಳ್ಳುತ್ತಿವೆ. ಪ್ರತಿ ವರ್ಷ ಪರಿಶಿಷ್ಟ ವರ್ಗದವರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಕ್ರಿಯಾ ಯೋಜನೆಗ್ನು ರೂಪಿಸಿ, ಅಗತ್ಯ ಅನುದಾನಮವನ್ನು . ಆಯವ್ಯಯದಲ್ಲಿ ಒದಗಿಸಲಾಗುತ್ತಿದೆ. ಸಕಾಲದಲ್ಲಿ

		ಅರ್ಹ ಫಲಾನುಭವಿಗಳನ್ನು ಗುರುತಿಸಿ ಕಾಲಮಿತಿಯೊಳಗೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಅನುಷ್ಠಾನಗೊಳಿಸುವ ಮೂಲಕ ಯೋಜನೆಗಳ ಸೌಲಭ್ಯಗಳನ್ನು ಸದರಿ ಜನಾಂಗದವರಿಗೆ ತಲುಪಿಸಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೨೧೨೭

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು

ಅನುಬಂಧ – ೧

ಯೋಜನೆಗಳ ಸಂಕ್ಷಿಪ್ತ ವಿವರ :

೧. ಭೂ ಒಡೆತನ ಯೋಜನೆ :

ಬಹುತೇಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕುಟುಂಬಗಳು ಕೃಷಿ ಕಾರ್ಮಿಕರಾಗಿದ್ದು, ಭೂ ಮಾಲೀಕರಾಗಿಬೇಕೆನ್ನುವ ಇವರ ಕನಸನ್ನು ನನಸು ಮಾಡುವ ಯೋಜನೆ ಇದಾಗಿರುತ್ತದೆ. ಈ ಯೋಜನೆಯಡಿ ೨ ಎಕರೆ ಖುಷಿ ಅಥವಾ ೧ ಎಕರೆ ತರೀ ಜಮೀನು ಕೊಳ್ಳಲು ರೂ. ೬೦,೦೦೦/– ಗಳ ಘಟಕ ವೆಚ್ಚ ನಿಗದಿಪಡಿಸಲಾಗಿತ್ತು. ಸರ್ಕಾರವು ಆದೇಶ ಸಂಖ್ಯೆ : ಸ ಕ ಇ ೪೨ ಎಸ್.ಡಿ.ಸಿ ೦೪ (ಭಾ), ಬೆಂಗಳೂರು, ದಿನಾಂಕ : ೦೬–೦೬೨೦೦೬ರಲ್ಲಿ ಭೂ ಒಡೆತನ ಯೋಜನೆಯ ಘಟಕ ವೆಚ್ಚವನ್ನು ರಾಜ್ಯದ ಪ್ರತಿಯೊಂದು ಹಳ್ಳಿಗಳಿಗೆ ನೋಂದಣಿ ಇಲಾಖೆ ನಿಗದಿಪಡಿಸಿರುವ ಮಾರ್ಗಸೂಚಿ ಬೆಲೆಗೆ ಅನುಗುಣವಾಗಿ ಜಮೀನನ್ನು ಖರೀದಿಸಲು ಮಂಜೂರಾತಿ ನೀಡಿದೆ. ಅದರಂತೆ ೨೦೦೬–೦೭ ನೇ ಸಾಲಿನಲ್ಲಿ ಸೌಲಭ್ಯ ಕಲ್ಪಿಸಲು

ಕ್ರಮಕೈಗೊಳ್ಳಲಾಗಿದೆ. ಈ ಘಟಕ ವೆಚ್ಚದಲ್ಲಿ ಅರ್ಧಭಾಗ ಸಹಾಯಧನವಾಗಿಯೂ, ಉಳಿದರ್ಧ ಸಲದ ರೂಪದಲ್ಲೂ ಇರುತ್ತದೆ. ಸಾಲದ ಮೊತ್ತವನ್ನು ರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲದ ಹಣದಿಂದ ಭರಿಸಲಾಗುವುದು. ಈ ಸಾಲವನ್ನು ೧೦ ವರ್ಷಗಳಲ್ಲಿ ವಾರ್ಷಿಕ ಸಮಕಂತುಗಳಲ್ಲಿ ಶೇಕಡ ೬ರ ಬಡ್ಡಿದರದಲ್ಲಿ ಮರುಪಾವತಿ ಮಾಡಬೇಕಿರುತ್ತದೆ.

ಜಮೀನು ಮಾರಾಟ ಮಾಡಲು ಬರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸೂಕ್ತ ಜಮೀನುಗಳನ್ನು ಆಯ್ಕೆ ಮಾಡಿ ದರ ನಿಗದಿಪಡಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯಲ್ಲಿ ಆಯ್ಕೆಯಾದ ಜಮೀನಿನ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿಗೆ ಕಳುಹಿಸಿ, ಮಂಜೂರಾತಿಯನ್ನು ಪಡೆದು, ಜಮೀನನ್ನು ಕುಟುಂಬದ ಹೆಣ್ಣುಮಕ್ಕಳ ಹೆಸರಿನಲ್ಲಿ ನೋಂದಣಿ ಮಾಡಿಸಲಾಗುವುದು. ೧೯೯೦-೯೧ನೇ ಸಾಲಿನಿಂದ ಈ ಯೋಜನೆಯನ್ನು ಜಾರಿಗೊಳಿಸಲಘುತ್ತಿದೆ.

೨. ಸ್ವಯಂ ಉದ್ಯೋಗ ಯೋಜನೆ :

ನಿರುದ್ಯೋಗ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಬಹುತೇಕ ವಿದ್ಯಾವಂತ ನಿರುದ್ಯೋಗಿಗಳು, ಇವರು ಸ್ವಾವಲಂಭಿಗಳಾಗಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ನಿಗಮವು ಈ ಕೆಳಕಂಡ ೪ ವಿಧಗಳಲ್ಲಿ ಸಾಲಸೌಲಭ್ಯ ಒದಗಿಸುತ್ತಿದೆ.

೧. ರೂ. ೫೦,೦೦೦/- ದರವರೆಗಿನ ಘಟಕ ವೆಚ್ಚಕ್ಕೆ ನಿಗಮದಿಂದ ಗರಿಷ್ಠ ರೂ. ೧೦,೦೦೦/- ಗಳ ಸಹಾಯಧನ ಹಾಗೂ ಉಳಿದ ಮೊತ್ತವನ್ನು ಬ್ಯಾಂಕುಗಳ ಮುಖಾಂತರ ಸಾಲದ ರೂಪದಲ್ಲಿ ಒದಗಿಸಲಾಗುವುದು.

೨. ರೂ. ೫೦,೦೦೦/- ದಿಂದ ರೂ. ೧,೦೦,೦೦೦/- ದೊಳಗಿನ ಘಟಕ ವೆಚ್ಚಕ್ಕೆ ನಿಗಮದಿಂದ ಗರಿಷ್ಠ ರೂ. ೧೦,೦೦೦/- ಗಳ

ಸಹಾಯಧನ ಹಾಗೂ ಉಳಿದ ಮೊತ್ತವನ್ನು ಬ್ಯಾಂಕುಗಳ ಮುಖಾಂತರ ಸಾಲದ ರೂಪದಲ್ಲಿ ಒದಗಿಸಲಾಗುವುದು.

(ಇ) **ನೀರಾವರಿ ಯೋಜನೆ :-**

ಯೋಜನೆಯ ಪ್ರಾರಂಭದಿಂದ ನದಿಗಳ ಪಕ್ಕದಲ್ಲಿ ಏತ ನೀರಾವರಿ ಯೋಜನೆಯನ್ನು ಕೈಗೊಳ್ಳಲಾಗುತ್ತಿದೆ.

೪. ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ : –

ಈ ಯೋಜನೆಯ ರಾಷ್ಟ್ರೀಯ ಯೋಜನೆಯಾಗಿದ್ದು, ಪ್ರತಿ ಅಭ್ಯರ್ಥಿಗಳಿಗೆ ರೂ. ೫೦,೦೦೦-೦೦ ಗಳ ಮಿತಿಯೊಳಗೆ ಆರ್ಥಿಕ ಸೌಲಭ್ಯ ಒದಗಿಸಲಾಗುವುದು. ನಿಗಮದಿಂದ ಶೇ/ ೫೦ ಭಾಗ ಸಹಾಯಧನ ಗರಿಷ್ಟ ಮೊತ್ತ ರೂ . ೧೦,೦೦೦-೦೦ ಮತ್ತು ಶೇ. ೧೫ ಭಾಗ ಅಂಚಿನ ಹಣ ರೂ. ೭,೫೦೦-೦೦ ಗಳನ್ನು ಬಿಡುಗಡೆ ಮಾಡಲಾಗುವುದು. ಉಳಿದ ಮೊತ್ತವನ್ನು ಬ್ಯಾಂಕ್ ಹಣಕಾಸು ಸಂಸ್ಥೆಯಿಂದ ಒದಗಿಸಲಾಗುವುದು. ಇದಲ್ಲದೆ ಎನ್.ಎಸ್.ಕೆ.ಎಫ್.ಡಿ.ಸಿ ಮೂಲಕ ನೇರಸಾಲವನ್ನು ಒದಗಿಸಲಾಗುವುದು.

೫. ತರಬೇತಿ ಕಾರ್ಯಕ್ರಮ :

೨೦೦೬-೦೭ನೇ ಸಾಲಿನಲ್ಲಿ ನಿಗಮದ ಸ್ವಯಂ ಉದ್ಯೋಗ ಯೋಜನೆಯಡಿ ಬಿಡುಗಡೆಯಾಗಿರುವ ಹಣದಲ್ಲಿ ಪರಿಶಿಷ್ಟ ಜಾತಿಗೆ ರೂ. ೨.೦೦ ಕೋಟಿ ಮತ್ತು ಪರಿಶಿಷ್ಟ ವರ್ಗಕ್ಕೆ ರೂ. ೦.೫೦ ಕೋಟಿ ಹಣವನ್ನು ಉಪಯೋಗಿಸಿಕೊಂಡು, ಈ ಕೆಳಕಂಡ ತರಬೇತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸರಕಾರವು ತನ್ನ ಸರಕಾರಿ ಆದೇಶ ಸಂ. ಸಕಿ / ೧೭೨/ಎಸ್.ಡಿಸಿ/೦೫, ಬೆಂಗಳೂರು, ದಿನಾಂಕ : ೦೯-೦೬-೨೦೦೬ ರಲ್ಲಿ ಆದೇಶಿಸಿದೆ.

೧	ಫ್ಯಾಷನ್ ಮತ್ತು ಕ್ಲೋಥಿಂಗ್ ಟಕ್ನಾಲಜಿ	೮	ಮ್ಯಾಸನರಿ

೨	ಫ್ಯಾಷನ್ ನಿಟ್ ವೇರ್ ಮತ್ತು ಪ್ರೊಡಕ್ಷನ್ ಟಕ್ನಾಲಜಿ	೯	ಪ್ಲಂಬಿಂಗ್
೩	ಪ್ಲಾಸ್ಟಿಕ್ ಪ್ರೊಸೆಸಿಂಗ್ ಟೆಕ್ನಾಲಜಿ	೧೦	ಬಾರ್ ಬೆಂಡಿಂಗ್
೪	ಪ್ಲಾಸ್ಟಿಕ್ ಮೋಲ್ಡ್ ಡಿಸೈನ್ ವಿತ್ ಆಟೋಕ್ಯಾಡ್	೧೧	ಚರ್ಮಗಾರಿಕೆ
೫	ಸೆಲ್ ಫೋನ್ ರಿಪೇರಿ	೧೨	ಕಾಲ್ ಸೆಂಟರ್ ಮತ್ತು ಬಿ.ಪಿ.ಒ ತರಬೇತಿ
೬	ಭಾರಿ ವಾಹನ ಚಾಲನೆ ತರಬೇತಿ		
೭	ಲಘು ವಾಹನ / ಆಟೋರಿಕ್ಷಾ ಚಾಲನೆ ತರಬೇತಿ		

ಅನುಬಂಧ – ೨೧೨೭

ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಜತಿ / ಪಂಗಡಗಳ ಅಭಿವೃದ್ಧಿ

ನಿಗಮವು ಅನುಷ್ಠಾನಿಸುತ್ತಿರುವ ಪರಿಶಿಷ್ಟ ಜತಿ ಕಲ್ಯಾಣ ಕಾರ್ಯಕ್ರಮಗಳ ವಿವರ.

೧. ವಿಶೇಷ ಘಟಕ ಯೋಜನೆಯಡಿ ಒಟ್ಟುಗೂಡಿಸಿದ ಹಣದಲ್ಲಿ ಕೈಗೊಂಡ ಹಲವು ಕಾರ್ಯಕ್ರಮಗಳು (ಅಂಬೇಡ್ಕರ್ ವಸತಿ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಮಹಿಳೆಯರಿಗಾಗಿ ಕೌಶಲ್ಯ ಯೋಜನೆ ಇತ್ಯಾದಿ)

೨. ಕೇಂದ್ರ ಪುರಸ್ಕೃತ ತರಬೇತಿ ಮತ್ತು ಸಂಬಂಧಪಟ್ಟ ಯೋಜನೆಗಳು (ಪರೀಕ್ಷಾ ಪೂರ್ವ ತರಬೇತಿ ಕೇಂದ್ರಗಳು) (ಕೇಂ.ಪು.ಯೋ)

೩. ರಾಮಕೃಷ್ಣ ಆಶ್ರಮದಂತಹ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಪರಿಶಿಷ್ಟ ಜತಿ ವಿದ್ಯಾರ್ಥಿಗಳ ಪ್ರವೇಶ.

೪. ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಸಹಾಯಧನ.

೫. ಶ್ರೇಷ್ಟತೆ ಪಡೆದ ಪರಿಶಿಷ್ಟ ಜತಿ ವಿದ್ಯಾರ್ಥಿಗಳಿಗೆ ಸಹಾಯ.

ಅ. ಎಂಫಿಲ್ : ಪಿ.ಹೆಚ್.ಡಿ. ವ್ಯಾಸಂಗ ಮಾಡುವ ಪರಿಶಿಷ್ಟ ಜತಿಯವರಿಗೆ ಸಹಾಯಧನ.

ಆ. ಪದವಿ : ಸ್ನಾತಕೋತ್ತರ ಪದವಿಗಳಲ್ಲಿ ರ್‍ಯಾಂಕ್ ಗಳಿಸಿದ ಪರಿಶಿಷ್ಟ ಜತಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ.

ಇ. ಐ.ಐ.ಟಿ./ಐ.ಐ.ಎಂ./ಐ.ಐ.ಎಸ್.ಸಿ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ಪರಿಶಿಷ್ಟ ಜತಿ ವಇದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ.

ಈ. ವಿದೇಶಿ ವಿಶ್ವವಿದ್ಯಾನಿಯಲಗಳಲಿ ವ್ಯಾಸಂಗಮಾಡುವ ಪರಿಶಿಷ್ಟ ಜತಿ ವಿದ್ಯಾರ್ಥಿಗಳಿಗೆ ಧನಸಹಾಯ.

೬. ಹೊಸ ಮೊರಾರ್ಜಿ ದೇಸಾಯಿ ನಿವಾಸಿ ಶಾಲೆಗಳ ಪ್ರಾರಂಭ.

೭. ಹೊಸ ವಿದ್ಯಾರ್ಥಿನಿಲಯಗಳ ಪ್ರಾರಂಭ

೮. ಸೆಮಿನಾರ್ಗಳು ಮತ್ತು ಕಮ್ಮಟಗಳನ್ನು ನಡೆಸುವುದು.

೯. ಸಂತ್ರಸ್ಥರಾದ ಪರಿಸಿಷ್ಟ ಜಾತಿ/ವರ್ಗದ ಜನರಿಗೆ ಪರಿಹರ (ಕೇಂ.ಪು.ಯೋ.)

೧೦. ಡಾ.ಬಿ.ಆರ್. ಅಂಬೇಡ್ಕರ್ ಜನ್ಮ ಶತಮಾನೋತ್ಸವದಡಿ ಪರಿಶಿಷ್ಟ ಜಾತಿಯವರ ವಿದ್ಯಾರ್ಥಿನಿಲಯಗಳಿಗಾಗಿ ನಿವೇಶನ ಖರೀದಿ, ಕಛೇರಿ ಕಟ್ಟಡಗಳಿಗಾಗಿ ಇತರೆ ಕಟ್ಟಡಗಳಿಗಾಗಿ ನಿವೇಶನ ಖರೀದಿ.

೧೧. ಅಸ್ಪೃಶ್ಯತಾ ನಿರ್ಮೂಲನೆ (ಪ.ಜಾತಿಯವರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಹಾಗೂ ಅಂತರ್ ಜಾತಿ ವಿವಾಹವಾದವರಿಗೆ ಪ್ರೋತ್ಸಾಹಧನ) (ಕೇಂ.ಪು.ಯೋ)

೧೨. ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ (ಕೇಂ.ಪು.ಯೋ.)

೧೩. ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ (ರಾಜ್ಯ ಯೋಜನೆ)

ಕರ್ನಾಟಕ ಪರಿಶಿಷ್ಟ ಜತಿ / ವರ್ಗಗಳ ಅಭಿವೃದ್ಧಿ ನಿಗಮ

೩೪. ಗಂಗಾ ಕಲ್ಯಾಣ ಯೋಜನೆ

೩೫. ಜಮೀನು ಖರೀದಿ ಯೋಜನೆ

೩೬. ಸ್ವಯಂ ಉದ್ಯೋಗ ಯೋಜನೆ

೩೭. ಮೈಕ್ರೋ ಕ್ರೆಡಿಟ್ ಯೋಜನೆ (ಸ್ವಸಹಯ ಗುಂಪುಗಳಿಗೆ)

೩೮. ಸಫಾಯಿ ಕರ್ಮಚಾರಿ ಪುನರ್ ವಸತಿ ಯೋಜನೆ

ಅನುಬಂಧ – ೨

ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಜಾತಿ / ಪಂಗಡಗಳ ಅಭಿವೃದ್ಧಿ

ನಿಗಮವು ಅನುಷ್ಠಾನಿಸುತ್ತಿರುವ ಪರಿಶಿಷ್ಟ ಜಾತಿ ಕಲ್ಯಾಣ ಕಾರ್ಯಕ್ರಮಗಳ ವಿವರ

೧. ಪರಿಶಿಷ್ಟ ಜಾತಿಯ ಉಪಯೋಜನೆಯಡಿ ಒಟ್ಟುಗೂಡಿಸಿದ ಹಣದಲ್ಲಿ ಕೈಗೊಂಡ ಹಲವು ಕಾರ್ಯಕ್ರಮಗಳು.

ಅಂಬೇಡ್ಕರ್ ವಸತಿ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಡಾ.ಬಿ.ಆರ್, ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನರಾಂ ರವರ ಹೆಸರಿನಲ್ಲಿ ೨ ಕುಗ್ರಾಮ ಆಯ್ಕೆ ಮಾಡಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ, ಮೆಡಿಕಲ್ ಮತ್ತು ಇಂಜಿನಿಯರಿಂಗ್ ಇತರೆ ವೃತ್ತಿಪರ ಕೋರ್ಸ್‌ಗಳಲ್ಲಿ ಓದುತ್ತಿರುವ ಅಭ್ಯರ್ಥಿಗಳಿಗೆ ಶುಲ್ಕ ಮರುಪಾವತಿ, ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ದೆಹಲಿಯಲ್ಲಿ ಐ.ಎ.ಎಸ್. ತರಬೇತಿ, ಮಿನಿ ಅಂಬೇಡ್ಕರ್ ಭವನ ನಿರ್ಮಾಣ,

ದೌರ್ಜನ್ಯದಲ್ಲಿ ನೋಂದ ಸಂತ್ರಸ್ಥರಿಗೆ ಸಹಾಯಧನ ಇತ್ಯಾದಿ ವಿಧ್ಯಾಭ್ಯಾಸ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

೨. ಕೇಂದ್ರ ಪುರಸ್ಕೃತ ತರಬೇತಿ ಮತ್ತು ಸಂಬಂಧಪಟ್ಟ ಯೋಜನೆಗಳು (ಪರೀಕ್ಷಾ ಪೂರ್ವ ತರಬೇತಿ ಕೇಂದ್ರಗಳು) (ಕೇಂ.ಪು.ಯೋ)

ಕೇಂದ್ರ ಹಾಘೂ ರಾಜ್ಯ ಲೋಕಸೇವಾ ಆಯೋಗಗಳು ಮತ್ತು ಇತರೆ ಆಯ್ಕೆ ಪ್ರಾಧಿಕಾರಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಬಯಸುವ ಪರಿಶಿಷ್ಟ ಜಾತಿ / ವರ್ಗ ಹಾಗೂ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಅಭ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ಸಿದ್ದತೆಗೆ ತರಬೇತಿ ನೀಡುವ ಸಲುವಾಗಿ ಸಮಾಜ ಕಲ್ಯಾಣ ಇಲಾಖೆಯ ಪರೀಕ್ಷಾ ಪೂರ್ವ ತರಬೇತಿ ಕೇಂದ್ರವನ್ನು ಬೆಂಗಳೂರಿನ ಡಾ:ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆಸಲಾಗುತ್ತಿದೆ. ತರಬೇತಿ ಪಡೆಯ ಬಯಸುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಶಿಷ್ಯ ವೇತನವನ್ನೂ ಸಹ ತರಬೇತಿ ಅವಧಿಯಲ್ಲಿ ನೀಡಲಾಗುವುದು.

೩. ರಾಮಕೃಷ್ಣ ಆಶ್ರಮದಂತಹ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಪ್ರವೇಶ : ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಉತ್ತಮ ವಿದ್ಯಾಭ್ಯಾಸ ಒದಗಿಸುವ ಸಲುವಾಗಿ ಪರತಿಷ್ಠಿತ ಸಂಸ್ಥೆಯದ ರಾಮಕೃಷ್ಣ ವಿದ್ಯಾಶಾಲೆಯನ್ನು ಮೈಸೂರಿನಲ್ಲಿ ನಡೆಸಲಾಗುತ್ತಿದೆ. ೭ನೇ ತರಗತಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಈ ಸಂಸ್ಥೆಯಲ್ಲಿ ಪ್ರವೇಶಾಕವಕಾಶ ದೊರಕಿಸಿಕೊಡುವುದಲ್ಲದೆ ಇವರ ವಿದ್ಯಾಭ್ಯಾಸದ ಸಂಪೂರ್ಣ ವೆಚ್ಚವನ್ನು ರಾಜ್ಯ ಸರ್ಕಾರದಿಂದ ಭರಿಸಲಾಗುವುದು.

೪. ಖಾಸಗಿ ವಿದ್ಯಾರ್ಥಿನಿಯಲಗಳಿಗೆ ಸಹಾಯಧನ.

ಸರ್ಕಾರದಿಂದ ಮಾನ್ಯತೆ ಪಡೆದು ನಡೆಸುತ್ತಿರುವ ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಕಟ್ಟಡ ನಿರ್ಮಾಣಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯಿಂದ ಅನುದಾನವನ್ನು ನೀಡಲಾಗುತ್ತಿದೆ. ಇದಕ್ಕೆ ಸ್ವಂತ ನಿವೇಶನ ಹೊಂದಿದ್ದು ಕಟ್ಟಡ ನಿರ್ಮಾಣ ಮಾಡಲು ಒಟ್ಟು ಅಂದಾಜು ವೆಚ್ಚದಲ್ಲಿ ಶೇ.೭೫ರಷ್ಟು ರಾಜ್ಯ ಸರ್ಕಾರದಿಂದ ವೆಚ್ಚವನ್ನು ಭರಿಸಲಾಗುವುದು.

೧೦. ಡಾ.ಬಿ.ಆರ್. ಅಂಬೇಡ್ಕರ್ ಜನ್ಮ ಶತಮಾನೋತ್ಸವದಡಿ ಪರಿಶಿಷ್ಟ ಜಾತಿಯವರ ವಿದ್ಯಾರ್ಥಿನಿಲಯಗಳಿಗಾಗಿ ಸವೇಶನ ಖರೀದಿ, ಕಛೇರಿ ಕಟ್ಟಡಗಳಿಗಾಗಿ ಇತರೆ ಕಟ್ಟಡಗಳಿಗಾಗಿ ನಿವೇಶನ ಖರೀದಿ.

ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆ ಖಾಸಗಿಯಾಗಿ ಅಗತ್ಯವಾದ ಜಮೀನು ಖರೀದಿಸುವ ಸಲುವಾಗಿ ಈ ಯೋಜನೆಯನ್ನು ರೂಪಿಸಲಾಗಿದ್ದು ಜಿಲ್ಲಾ ಪಂಚಾಯತ್ ಗಳಿಂದ ಬರುವ ಪ್ರಸ್ತಾವನೆಯನ್ನು ಅನುಸರಿಸಿ ಸರ್ಕಾರದ ಅನುಮೋದನೆಯನ್ನು ಪಡೆದು ನಿವೇಶನ / ಜಮೀನು ಖರೀದಿಸಲು ಮಂಜೂರಾತಿ ನೀಡಲಾಗುವುದು.

೧೧. ಅಸ್ಪೃಶ್ಯತಾ ನಿರ್ಮೂಲನೆ [ಪ.ಜಾತಿಯವರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಹಾಗೂ ಅಂತರ್ ಜಾತಿ ವಿವಾಹವಾದವರಿಗೆ ಪ್ರೋತ್ಸಾಹಧನ) (ಕೇಂ. ಪು.ಯೋ)

ಅಂತರ್ ಜಾತಿ ವಿವಾಹವಾಗುವ ದಂಪತಿಗಳ ಇಬ್ಬರಲ್ಲಿ ಒಬ್ಬರು ಪರಿಶಿಷ್ಟ ಜಾತಿಯವರಾಗಿದ್ದು ಇವರ ವಾರ್ಷಿಕ ವರಮಾನವು ತಲಾ ರೂ. ೨೪,೦೦೦/- ಒಳಗಿದ್ದು ಹಾಗೂ ಇವರ ಅಂತರ್ ಜಾತಿ ವಿವಾಹವು ಉಪ ನೋಂದಣಿ ಕಚೇರಿಯಲ್ಲಿ ನೋಂದಣಿಯಾಗಿದ್ದಲ್ಲಿ ಇವರಿಗೆ ಈ ಇಲಾಖೆಯಿಂದ ಒಟ್ಟಾರೆಯಾಗಿ ರೂ. ೨೫,೦೦೦ ಗಳನ್ನು ಮಂಜೂರು ಮಾಡಲಾಗುವುದು..

೧೨. ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ (ಕೇಂ.ಪು.ಯೋ)

ರಾಜ್ಯದ ಕೆಲವು ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕಾಗಿ ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರವು ಒಟ್ಟು ಅನುಮೋದಿತ ವೆಚ್ಚ ಶೇ. ೫೦ರ ಪಾಲಿನಷ್ಟು ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಮಾಡಲು ಅನುದಾನವನ್ನು ನೀಡುವುದು

೧೩. ವಿದ್ಯಾರ್ಥಿನಿಲಯಗಳ ಕಟ್ಟಡ ನಿಮಾಣ (ಕೇಂ.ಪು.ಯೋ)

ರಾಜ್ಯದ ವಿದ್ಯಾರ್ಥಿನಿಲಯಗಳಲ್ಲಿ ಹಲವು ಪರಿಶಿಟ ಜತಿ ವಿದ್ಯಾರ್ಥಿನಿಲಯಗಳ ಇನ್ನೂ ಬಾಡಿಗೆ ಕಾರ್ಯನಿರ್ವಹಿಸುತ್ತಿರುವುದರಿಂದ ರಾಜ್ಯ ಸರ್ಕಾರವು ಈ ಯೋಜನೆಯಡಿಯಲ್ಲಿ ಮುಂದುವರೆದ ಹಾಗೂ ಹೊಸ ಕಾಮಗಾರಿಗಳ ಜೊತೆಗೆ ಇನ್ನಿತರ ಅಗತ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿದ್ದು ಈಗಾಗಲೇ ಈ ಕಾರ್ಯಕ್ರಮಗಳು ಚಾಲ್ತಿಯಲ್ಲಿವೆ.

೧೪. ನಿವಾಸಿ ಶಾಲೆಗಳ ಕಟ್ಟಡ ನಿರ್ಮಾಣ

ನಿರ್ಮಾಣ ಹಂತದಲ್ಲಿರುವ ವಸತಿ ಶಾಲೆಗಳ ಕಟ್ಟಡಗಳ ಕಾಮಗಾರಿಯನ್ನು ಮುಂದುವರೆಸಲು ಹಾಗೂ ನಿವೇಶನದ ಲಭ್ಯತೆಯನ್ನು ಆಧರಿಸಿ ಹೊಸ ನಿವಾಸಿ ಶಾಲೆಗಳ ಕಟ್ಟಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದೇ ಈ ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

೧೫. ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆ.

ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಗ್ರಾಮಾಂತರ ಪ್ರದೇಶದ ಪರಿಶಿಷ್ಟ ಜತಿಯ ವಿದ್ಯಾರ್ಥಿಗಳಿಗೆ ಹೆಚ್ಚಿನ ಆಸಕ್ತಿ ವಹಿಸಿ ವಿದ್ಯಾಭ್ಯಾಸ ಮುಂದುವರೆಸಲು ಅನುಕೂಲವಾಗುವಂತೆ ಈ ಯೋಜನೆಯನ್ನು ರೂಪಿಸಿದೆ. ಈ ಕಾರ್ಯಕ್ರಮದಡಿಯಲ;ಲಿ ವಿದ್ಯಾರ್ಥಿಗಳಿಗೆ ಉಚಿತ ಭೋಜನ ಮತ್ತು ವಸತಿ ಸೌಕರ್ಯ ಪ್ರತಿಯೊಬ್ಬ ವಿದ್ಯಾರ್ಥಿಗೆ ವಿದ್ಯಾರ್ಥಿವೇತನ ಲೈಬ್ರರಿ ಸೌಲಭ್ಯ ಮುಂದತಾವುಗಳನು ಒದಗಿಸಲಾಗುತ್ತಿದೆ.

೧೬. ಪರಿಶಿಷ್ಟ ಜತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಇತ್ಯಾದಿ

ಈ ಕಾರ್ಯಕ್ರಮದಡಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ನಗದು ಬಹುಮಾನ ಪರಿಶಿಷ್ಟ ಜಾತಿಯವರ ವಿದ್ಯಾರ್ಥಿಗಳಿಗೆ ತಮ್ಮ ವಾರ್ಷಿಕ ಪರೀಕ್ಷೆಯಲ್ಲಿ ಆರೋಗ್ಯಕರ ಸ್ಪರ್ಧಾತ್ಮಕ ಮನೋಭಾವನೆಯನ್ನು ಪ್ರೇರೇಪಿಸುವ ಸಲುವಾಗಿ ಪ್ರೋತ್ಸಾಹಧನವನ್ನು ಮಂಜೂರು

ಮಾಡಲಾಗುತ್ತಿದೆ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪ್ರಥಮ ಬಾರಿಗೆ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪ್ರತೀ ವಿದ್ಯಾರ್ಥಿಗೆ ತಲಾ ರೂ. ೫೦೦/– ರಂತೆ ಪ್ರೋತ್ಸಾಹದನವನ್ನು ಮಂಜೂರು ಮಾಡಲಾಗಿದೆ.

೨೩. ಪ್ರತಿಭಾವಂತ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವುದು ()

ವೈದ್ಯಕೀಯ ಮತ್ತು ತಾಂತ್ರಿಕ ವೃತ್ತಿಬೆಲೆ ಕೋರ್ಸ್‌ಗಳಲ್ಲಿ ಹೆಚ್ಚು ಹೆಚ್ಚು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಸೇರ್ಪಡೆಯಾಗುವುದನ್ನು ದೃಡಪಡಿಸಿಕೊಳ್ಳಲು ಭಾರತ ಸರ್ಕಾರದ ಶೇ.೧೦೦ ಪಾಲಿನಲ್ಲಿ ಈ ಕಾರ್ಯ ಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ೯ನೇ ತರಗತಿಯಿಂದ ೧೨ನೇ ತರಗತಿಯವರೆಗೆ ಓದುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ವಿಜ್ಞಾನದ ವಿಷಯದಲ್ಲಿ ವಿಶೇಷ ತರಬೇತಿಯನ್ನು ಭೋದಕರಿಂದ ನೀಡಲಾಗುತ್ತಿದೆ.

೨೪. ವೈದ್ಯಕೀಯ / ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ / ವರ್ಗ ವಿದ್ಯಾರ್ಥಿಗಳಿಗೆ ಪುಸ್ತಕ ಭಂಡಾರ (ಕೇಂ.ಪು.ಯೋ)

ವಿವಿಧ ತಾಂತ್ರಿಕ ಮತ್ತು ವೈದ್ಯಕೀಯ ತರಗತಿಗಳಲ್ಲಿ ಓದುತ್ತಿರುವ ಪರಿಶಿಷ್ಟ ಜತಿಯವರ ಮಕ್ಕಳಿಗೆ ಬುಕ್ ಬ್ಯಾಂಕ್ ಸೌಲಭ್ಯ ಒದಗಿಸಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇಂತಹ ವಿದ್ಯಾರ್ಥಿಗಳು ತಮ್ಮ ಆದ್ಯಯನಕ್ಕೆ ಬೇಕಾಗುವ ಪುಸ್ತಕಗಳು, ಸಲಕರಣೆಗಳನ್ನು ಪೂರೈಸಲು ವಿವಿಧ ವಿದ್ಯಾಸಂಸ್ಥೆಗಳಲ್ಲಿ ಪ್ರತ್ಯೇಕವಾದ ಬುಕ್ ಬ್ಯಾಂಕ್ ಗಳ ವ್ಯವಸ್ಥೆ ಮಾಡಲಾಗುತ್ತಿದೆ. ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ತರಗತಿವಾರು ಬೇಕಾಗುವ ಪಠ್ಯಪುಸ್ತಕಗಳನ್ನು ಖರೀದಿಸಲು ಹಾಗೂ ಸದರಿ ಪುಸ್ತಕಗಳನ್ನು ಕಪಾಟುಗಳಲ್ಲಿ ಇಡಲು ಕಪಾಟು ಖರೀದಿಸುವ ಬಗ್ಗೆ ಇದರ ವೆಚ್ಚ

ಹಾಗೂ ಸಾಗಾಣಿಕೆ ವೆಚ್ಚವನ್ನು ಈ ಕಾರ್ಯಕ್ರಮದಡಿಯಲ್ಲಿ ನೀಡುವ ವ್ಯವಸ್ಥೆ ಇರುತ್ತದೆ.

೨೫. ಹೊಲಿಗೆ ಯಂತ್ರಗಳ ಸರಬರಾಜು.

ಪರಿಶಿಷ್ಟ ಜಾತಿ/ ವರ್ಗ ಹಾಗೂ ಇತರೆ ಹಿಂದುಳಿದ ವರ್ಗದ ಮಹಿಳೆಯರಿಗೆ ಹೊಲಿಗೆ ತರಬೇತಿಯನ್ನು ನೀಡಲು ಜಿಲ್ಲಾದ್ಯಂತ ಹೊಲಿಗೆ ತರಬೇತಿ ಕೇಂದ್ರವನ್ನು ನಡೆಸಲಾಗುತ್ತಿದೆ. ಮಹಿಳೆಯರು ಹೊಲಿಗೆ ತರಬೇತಿ ಪಡೆದು ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಹಾಗೂ ಮುಂದಕ್ಕೆ ಹೊಲಿಗೆ ವೃತ್ತಿಯನ್ನು ಮುಂದುವರೆಸುವ ಸಲುವಾಗಿ ಇವರಿಗೆ ಒಂದು ಹೊಲಿಗೆ ಯಂತ್ರವನ್ನು ಉಚಿತವಾಗಿ ಪೂರೈಸಲಾಗುವುದು.

೨೬. ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳು

ಪರಿಶಿಷ್ಟ ಜಾತಿಯ ಮಕ್ಕಳಿಗೆ ವೈಯಕ್ತಿಕ ಶುಚಿತ್ವ, ಅಪೌಷ್ಟಿಕತೆ ನಿವಾರಣೆ, ಅಕ್ಷರಾಭ್ಯಾಸ ಹಾಗೂ ಶಾಲೆಗೆ ಹೋಗುವ ಪ್ರವೃತ್ತಿಯನ್ನು ಬೆಳೆಸಲು ಈ ಕೇಂದ್ರಗಳನ್ನು ತೆರೆಯಲಾಗಿದೆ. ಒರತೀ ಮನೆಯಲ್ಲಿರುವ ೩ ವರ್ಷದಿಂದ ೫ ವರ್ಷದವರೆಗಿನ ಗಂಡು / ಹೆಣ್ಣು ಮಕ್ಕಳ ಗಣತಿಯನ್ನು ಗಣನೆಗೆ ತಂದು ಪೋಷಕರಿಂದ ಅರ್ಜಿಯನ್ನು ಪಡೆದು ಮಕ್ಕಳನ್ನು ಶಿಶು ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳಿಗೆ ಸೇರಿಸಲಾಗುವುದು. ಈ ಯೋಜನೆಯಡಿಯಲ್ಲಿ ಪ್ರತೀ ಮಗುವಿಗೆ ಪೌಷ್ಟಿಕ ಆಹಾರ, ವಾರ್ಷಿಕ ೨ ಜೊತೆ ಸಮವಸ್ತ್ರ, ಸೋಪು ಹಗೂ ಎಣ್ಣೆ ಒದಗಿಸುವ ಸಲುವಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

೨೭. ಕಟ್ಟಡಗಳ ನಿರ್ವಹಣೆ (ಸೇರ್ಪಡೆ ಮತ್ತು ಮಾರ್ಪಾಡು ಇತ್ಯಾದಿ)

ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಕಟ್ಟಡಗಳ ದುರಸ್ಥಿ, ಸುಣ್ಣ – ಬಣ್ಣ, ವಿದ್ಯುತ್ ರಿಪೇರಿ ಮುಂತಾದವುಗಳ ನಿರ್ವಹಣೆಯನ್ನು ಈ ಕಾರ್ಯಕ್ರಮದಡಿಯಲ್ಲಿ

ರೂಪಿಸಲಾಗುತ್ತಿದೆ. ಹಿಂದೆ ಕಟ್ಟಲಾದ ವಸತಿ ನಿಲಯಗಳಲ್ಲಿ ಸಂಖ್ಯಾಭಲ ಹೆಚ್ಚಳದಿಂದ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಮಾಡಿಕೊಡುವ ಸಲುವಾಗಿ ಹೆಚ್ಚುವರಿ ಕೊಠಡಿಗಳನ್ನು ಕಟ್ಟಲು ಹಾಗೂ ವಿದ್ಯಾರ್ಥಿನಿಲಯಗಳ ಉನ್ನತೀಕರಣಕ್ಕಾಗಿ ಹಫೂ ಕೆಲವೊಂದು ಮಾರ್ಪಾಡುಗಳಿಗೆ ಹೊಂದಿಕೊಂಡು ಈ ಕಾರ್ಯಕ್ರಮವನ್ನು ರೂಪಿಸಲಾಗುತ್ತಿದೆ.

೨೮. ಕಾನೂನು ಪದವೀಧರರಿಗೆ ತರಬೇತಿ ಮತ್ತು ಸಹಾಯಧನ.

ಪರಿಶಿಷ್ಟ ಜಾತಿಯ ಕಾನೂನು ಪದವೀಧರರಿಗೆ ಆಡಳಿತೆ ನ್ಯಾಯಾಧೀಕರಣದಲ್ಲಿ ತರಬೇತಿ ಪಡೆಯಲು ಮಾಹೆಯಾನ ರೂ. ೧೦೦೦/- ಗಳ ಶಿಷ್ಯವೇತನ ನೀಡಲಾಗುತ್ತಿದೆ.

೨೯. ಕೇಂದ್ರ ಸರ್ಕಾರದ ವಿದ್ಯಾರ್ಥಿವೇತನಕ್ಕೆ ಮೀರಿದ ಹೆಚ್ಚಿನ ಊಟ ಮತ್ತು ವಸತಿ ವೆಚ್ಚ ಸಹಾಯ.

ರಾಜ್ಯ ಸರಕಾರದಲ್ಲಿನ ಅಂಗೀಕೃತ ಕಾಲೇಜು ವಿದ್ಯಾರ್ಥಿನಿಲಯಗಳಲ್ಲಿ ಇರುವಂತಹ ಪ.ಹಾತಿಯ ವಿದ್ಯರ್ಥಿಗಳಲ್ಲಿ ಭಾರತ ಸರಕಾರದ ವಿದ್ಯಾರ್ತಿವೇತನಕ್ಕೆ ಅರ್ಹರಾಗಿರುವಂತಹವರಿದಗೆ ಹೆಚ್ಚುವರಿ ಭೋಜನಾ ವೆಚ್ಚ ಗರಿಷ್ಟ ಮೊತ್ತ ರೂ. ೫೦೦/- ರಂತೆ ಪ್ರತೀ ವಿದ್ಯಾರ್ಥಿಗೆ ಖರ್ಚು ಮಾಡಲಾಗುತ್ತಿದೆ.

೩೭. ಮೈಕ್ರೊ ಕ್ರೆಡಿಟ್ ಯೋಜನೆ (ಸ್ವಸಹಾಯ ಗುಂಪುಗಳಿಗೆ)

೩೮. ಸಫಾಯಿ ಕರ್ಮಚಾರಿ ಪುನರ್ ವಸತಿ ಯೋಜನೆ

ಈ ಯೋಜನೆಯು ರಾಷ್ಟ್ರೀಯ ಯೋಜನೆಯಾಗಿದ್ದು, ನಗರಾಭಿವೃದ್ಧಿ ಇಲಾಖೆಯು ಸ್ಕ್ಯಾವೆಂಜರ್ ಗಳನ್ನು ಗುರುತಿಸಲು ಸರ್ವೆ ಕಾರ್ಯ ಕೈಗೊಂಡಿದ್ದು ಸದರಿ ಸರ್ವೆಯಲ್ಲಿ ಗುರುತಿಸಿದ ಎಲ್ಲಾ ಸ್ಕ್ಯಾವೆಂಜರ್ ಗಳಿಗೆ ಕೇಂದ್ರ ಸರ್ಕಾರದ ನಿರ್ದೇಶನದಂತೆ ಪುನರ್ವಸತಿ ಕಲ್ಪಿಸಲಾಗುವುದು.

ಅನುಬಂಧ – ೧(ಬಿ)

ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಶೈಕ್ಷಣಿಕ ಕಾರ್ಯಕ್ರಮಗಳ ವಿವರ :–

೧. ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮೆಟ್ರಿಕ್ ಪೂರ್ಣ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು

೨. ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆಶ್ರಮಶಾಲೆಗಳು.

೩. ೧ನೇ ತರಗತಿಯಿಂದ ಸ್ನಾತಕೋತ್ತರ ಹಂತದವರೆಗೆ ವಿವಿಧ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿವಿಧ ವಿದ್ಯಾರ್ಥಿವೇತನಗಳು.

೪. ಐ.ಐ.ಟಿ. ಐ.ಐ.ಎಂ. ಐ.ಐ.ಎಸ್.ಸಿ,. ಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವ್ಯಾಸಂಗದ ಪೂರ್ಣ ಅವಧಿಗೆ ರೂ. ೫೦,೦೦೦/– ಗಳ ಕ್ರಮವಾಗಿ ರೂ. ೮,೦೦೦/– ಮತ್ತು ರೂ. ೧೦,೦೦೦/– ಗಳ ಸಹಾಯಧನ.

೫. ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ಅಧ್ಯಯನ ವಿಭಾಗದಲ್ಲಿ ಎಂಫಿಲ್. ಪಿ.ಹೆಚ್.ಡಿ ಅಧ್ಯಯನ ಮಾಡುತ್ತಿರುವ ಪರಿಶಿಷ್ಟ, ವರ್ಗದ ವಿದ್ಯಾರ್ಥಿಗಳಿಗೆ ಕ್ರಮವಾಗಿ ರೂ. ೮,೦೦೦/– ಮತ್ತು ರೂ. ೧೦,೦೦೦/– ಗಳ ಸಹಾಧನ.

೬. ಪ್ರೌಢಶಾಲೆಗಳಲೊಇ ವಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಯರಿಗೆ ವಿದ್ಯಾಭ್ಯಾಸ ಮುಂದುವರಿಸುವಂತೆ ಉತ್ತೇಜಿಸಲು ವಿದ್ಯಾರ್ಥಿವೇತನದೊಂದಿಗೆ ರೂ. ೫೦೦/– ಗಳ ಪ್ರೋತ್ಸಾಹ ಧನ.

೭. ಮೂಲ ನಿವಾಸಿ ಬುಡಕಟ್ಟು ಜನಾಂಗದ ವಿದ್ಯಾರ್ಥಿಗಳ ಪೋಷಕರು ಅವರ ಮಕ್ಕಳನ್ನು ಶಾಲೆಗಳಿಗೆ ಸೇರಿಸುವಂತೆ ಉತ್ತೇಜನವನ್ನು ನೀಡಲು ವಾರ್ಷಿಕ ರೂ. ೨೦೦/- ರ ಪ್ರೋತ್ಸಾಹಧನ.

೮. ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಗಳಲ್ಲಿ ಪ್ರತಿ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ೫ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಕ್ರಮವಾಗಿ ರೂ. ೫೦೦೦/- ಮತ್ತು ರೂ. ೧೦,೦೦೦/- ಗಳ ಪ್ರೋತ್ಸಾಹಧನ.

೯. ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಬಹುಮಾನ ಹಣ.

೧೦. ಪರಿಶಿಷ್ಟ ವರ್ಗದ ಕಾನೂನು ಪದವೀದರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ ೪ ವರ್ಷಗಳ ತರಬೇತಿಯನ್ನು ನೀಡಲಾಗುತ್ತಿದ್ದು ತರಬೇತಿ ಅವಧಿಯಲ್ಲಿ ಪ್ರತಿ ತಿಂಗಳು ರೂ. ೧೦೦೦/- ರಂತೆ ಶಿಷ್ಟ ವೇತನ.

೧೧. ನವಚೇತನ

ಯೋಜನೆಯಡಿಯಲ್ಲಿ ಪರಿಶಿಷ್ಟ ವರ್ಗದ ನಿರುದ್ಯೋಗಿ ಯುವ ಜನರು ಉದ್ಯೋಗ/ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ಮಾಹಿತಿ ತಂತ್ರ ಜ್ಞಾನವೂ ಸೇರಿದಂತೆ ವಿವಿಧ ವೃತ್ತಿಪರ ಟ್ರೇಡ್ ಗಳಲ್ಲಿ ತರಬೇತಿ.

೧೨. ವಿದೇಶಿ ವಿಶ್ವ

ವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವ್ಯಾಸಂಗದ ಅವದಿಗೆ ಗರಿಷ್ಟ ರೂ. ೧೦.೦೦ ಲಕ್ಷಗಳ ಧನ ಸಹಾಯ.

೧೩. ವೈದ್ಯಕೀಯ, ದಂತ ವೈದ್ಯಕೀಯ

ತಾಂತ್ರಿಕ ಮುಂತಾದ ವೃತ್ತಿಪರ ಕೋಸ್ ರ್ಗಳಿಗೆ ಪ್ರವೇಶ ಪಡೆಯುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ.

ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳ ವಿವರ (ರಾಜ್ಯವಲಯ)

ಕ್ರ.ಸಂ	ಕಾರ್ಯಕ್ರಮಗಳು
೧	ಕೃಷಿ ಅಭಿವೃದ್ಧಿ – ಕೃಷಿ ಪರಿಕರಗಳು, ಆಧುನಿಕ ಕೃಷಿ ಉಪಕರಣಗಳು, ಪಂಪ್ ಸೆಟ್, ಸ್ಪಿಂಕ್ಲರ್ ಸೆಟ್, ಪವರ್ ಟೆಲ್ಲರ್, ಉಳುಮೆ ಎತ್ತುಗಳ ವಿತರಣೆ.
೨.	
೩	ಪಶು ಸಂಗೋಪನೆ – ನಬಾರ್ಡ್ ದರದಲ್ಲಿ ಶೇ.೭೫ರ ಸಹಾಯಧನದಡಿ ಮಿಶ್ರತಳಿ ಹಸು ಘಟಕ, ಎಮ್ಮೆ ಘಟಕ, ಕುರಿ ಘಟಕ / ಹಂದಿ ಘಟಕಗಳ ವಿತರಣೆ.
೪	ರೇಷ್ಮೆ – ಹಿಪ್ಪುನೇರಳೆ ಬೇಸಾಯಕ್ಕೆ ಸಹಾಯಧನ, ರೇಷ್ಮೆ ಹುಳು ಸಾಕಾಣಿಕೆಗೆ ಸಹಾಯಧನ. ರೇರಿಂಗ್ ಹೌಸ್ ಗಳ ನಿರ್ಮಾಣಕ್ಕೆ ಸಹಾಯಧನ.
೫	ಗ್ರಾಮೀಣ_____ ಸ್ವಯಂಉಯೋಗ ಕೈಗೊಳ್ಳಲು ಜೇನು ಸಾಕಾಣಿಕೆ., ?????????????????????? ?????????????????????? ವಿತರಣೆ.
೬	ಉದ್ಯೋಗ ಮತ್ತು ತರಬೇತಿ ಪರಿಶಿಷ್ಟ ವರ್ಗದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಹೊಲಿಗೆ ತರಬೇತಿ ಹಾಗೂ ಉಚಿತ ಹೊಲಿಗೆ ಯಂತ್ರಗಳ ಪೂರೈಕೆ.
೭	ಮಹಿಳಾ ಮತ್ತು ಅಭಿವೃದ್ಧಿ ಇಲಾಖೆ ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಸ್ತ್ರೀ ಶಕ್ತಿ ಯೋಜನೆ, ನವಜೀವನ ಯೋಜನೆ, ಉದ್ಯೋಗಿನಿ ಯೋಜನೆಯಡಿ ಸಹಾಯಧನ ವಿತರಣೆ ಹಾಗೂ ಪರಿಶಿಷ್ಟ ವರ್ಗದ ಮಕ್ಕಳಿಗೆ ವಿಶೇಷ ಪೌಷ್ಟಿಕ ಆಹಾರ ವಿತರಣೆ.
೮	ಸಾರ್ವಜನಿಕ ??????????/ ೧. ವಿದ್ಯಾ ವಿಕಸ ಯೋಜನೆಯಡಿ ೧ ರಿಂದ ೭ನೇ ತರಗತಿಯರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಪಂಗಡದ

	ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ವಿತರಣೆ. ೨. ೧ ರಿಂದ ೭ ನೇ ತರಗತಿಯರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ಬಾಲಕಿಯರಿಗೆ ಶಾಲಾ ಬ್ಯಾಗ್ ಗಳನ್ನು ವಿತರಿಸುವುದು.
೯	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಆರ್ಥಿಕ ಸಹಾಯ, ಉದ್ಯೋಗ ಮತ್ತು ಜೀವನ ಪುಟ್ಟವನ್ನು ಸುಧಾರಿಸಲು ಕೆಳಕಂಡ ಕಾರ್ಯಕ್ರಮಗಳಡಿಯಲ್ಲಿ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ೧. ಸ್ವರ್ಣ ಜಯಂತಿ ಶಹರಿ ರೋಜ್ ಗಾರ್ ಯೋಜನೆ ೨. ಎಸ್.ಜಿ.ಆರ್. ವೈ
	ಮೂಲಭೂತ ಸೌಲಭ್ಯ
೧	ಪರಿಸಿಷ್ಟ ವರ್ಗದ ಕಾಲೋನಿಗಳಿಗೆ ಕುಡಿಯುವ ನೀರಿನ ಸೌಲಭ್ಯ
೨	ಗ್ರಾಮೀಣ ನೈರ್ಮಲ್ಯ ಯೋಜನೆಯಡಿಯಲ್ಲಿ ಸಂಪರ್ಕ ರಸೆ, ಅಭಿವೃದ್ಧಿ ಮತ್ತು ಚರಂಡಿ ನಿರ್ಮಾಣ.
೩	ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ವಿದ್ಯುದ್ದೀಕರಣ ಮತ್ತು ಬಾಗ್ಯಜ್ಯೋತಿ ಯೋಜನೆಯಡಿ ಮನೆಗಳಿಗೆ ವಿದ್ಯುತ್ ಸಂಪರ್ಕ.

ಕೇಂದ್ರ ವಲಯ ಕಾರ್ಯಕ್ರಮಗಳು

ಕ್ರ.ಸಂ	ಕಾರ್ಯಕ್ರಮಗಳು
೧	ವಿಶೇಷ ಕೇಂದ್ರೀಯ ಸಹಾಯಧನ ಪರಿಶಿಷ್ ವರ್ಗದವರ ಜಮಿನು ಅಭಿವೃದ್ಧಿಗೆ ನೀರು ಸಂಗ್ರಣಾ ವ್ಯವಸ್ಥೆಗಳ ನಿರ್ಮಾಣ, ಸ್ಕ್ರಿಂಕ್ಲರ್ ಸೆಟ್, ಉಳುಮೆ ಎತ್ತು, ಕೃಷಿ ಉಪಕರಣಗಳು, ಸಸ್ಯ ಸಂರಕ್ಷಣಾ ಉಪಕರಣಗಳು, ಟಿಲ್ಲರ್ ವಿತರಣೆ, ತೋಟಗಾರಿಕೆ ಅಭಿವೃದ್ಧಿಗೆ ಸಹಾಧನ, ಪಶು ಸಂಗೋಪನೆ ಅಭಿವೃದ್ಧಿಯಡಿ ಹಸು ಘಟಕ, ಕುರಿ ಮತ್ತು ಹಂದಿ ಘಟಕಗಳ ವಿತರಣೆ, ಗ್ರಾಮೀಣ ಕೈಗಾರಿಕೆಗೆ ಸಹಾಯಧನ, ಸ್ವಯಂ ಉದ್ಯೋಗ

	ತರಬೇತಿ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತದೆ.
೨	ಭಾರತ ಸಂವಿಧಾನ ಅನಚ್ಛೇದ ೨೭೫(೧) ರ ಅನುದಾನ ಪರಿಶಿಷ್ಟ ವರ್ಗದವರ ಕಾಲೋನಿಗಳಲ್ಲಿ ಕುಡಿಯುವ ನೀರು,. ಸಂಪರ್ಕ ರಸ್ತೆ ಅಭಿವೃದ್ಧಿ, ಚರಂಡಿ ನಿರ್ಮಾಣ, ಸಮುದಾಯ ಭವನ ನಿರ್ಮಾಣ, ಜಮೀನು ಅಭಿವೃದಿ, ನೀರಾವರಿ ಸೌಲಭ್ಯ, ಪರಿಶಿಷ್ಟ ವರ್ಗದವರ ಜಮೀನಗಳಿಗೆ ಸೋಲಾರ್ ತಂತಿಬೇಲಿ ನಿರ್ಮಾಣ, ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠನಗೊಳಿಸಲಾಗುತ್ತಿದೆ.
೩	ಆದಿವಾಸಿ ಪಂಗಡದವರ ಅಭಿವೃದ್ಧಿ ಆದಿವಾಸಿ ಜನಾಂಗಕ್ಕೆ ಸೇರಿದ ಕೊರಗ ಮತ್ತು ಜೇನುಕುರು ಪಂಗಡದವರ ಅಭಿವೃದ್ಧಿಗೆ ವಿಶೇಷ ಆರ್ಥಿಕ ನೆರವು ಮತ್ತು ಜನಶ್ರೀ ವಿಮಾ ಸೌಲಭ್ಯ.
೪	ವೃತ್ತಿ ತರಬೇತಿ ಕಾರ್ಯಕ್ರಮ– ಪರಿಶಿಷ್ಟ ವರ್ಗದ ವಿದಾವಂತ ನಿರುದ್ಯೋಗಿ ಅಭ್ಯರ್ಥಿಗಳಿಗೆ ವಿವಿಧ ವೃತ್ತಿಪರ ಕೋಸ್ ್ರಗಳಲ್ಲಿ ಒಂದು ವರ್ಷದ ತರಬೇತಿ.
೫	ಪರಿಶಿಷ್ಟ ವರ್ಗದ ಆಶ್ರಮಶಾಲೆ / ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ – ಕೇಂದ್ರ ಪುರಸ್ಕೃತ ಯೋಜನೆಯಡಿ ಪರಿಶಿಷ್ಟ ವರ್ಗದ ಆಶ್ರಮಶಾಲೆ / ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೆ ಕೇಂದ್ರ ಸರ್ಕಾರವು ಶೇ. ೫೦ ರಷ್ಟು ಅನುದಾನವನ್ನು ಮಂಜೂರು ಮಾಡುತ್ತದೆ.
೬	ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರ ವಿದ್ಯಾರ್ಥಿವೇತನ ನೀಡಲಾಗುತ್ತಿದೆ.
೭	ತರಬೇತಿ ಮತ್ತು ಸಂಬಂದಿತ ಯೋಜನೆ – ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ವಿಶೇಷ ತರಬೇತಿ ಕಾರ್ಯಕ್ರಮ
೮	ಗಿರಿಜನ ಸಂಶೋಧನಾ ಸಂಸ್ಥೆ ಸ್ಥಾಪನೆ – ಕೇಂದ್ರ ಪುರಸ್ಕೃತ ಯೋಜನೆಯಡಿ ಗಿರಿಜನ ಸಂಶೋಧನಾ ಸಂಸ್ಥೆ ಸ್ಥಾಪನೆಗೆ ಅನುದಾನ.

ಕೇಂದ್ರ ವಲಯ ಕಾರ್ಯಕ್ರಮಗಳು

ಪರಿಶಿಷ್ಟ ವರ್ಗದವರ ಅಭಿವೃದ್ಧಿಗೆ ಕೇಂದ್ರ ಸರ್ಕಾರವು ಕೇಂದ್ರ ಪುರಸ್ಕೃತ ಮತ್ತು ಕೇಂದ್ರವಲಯ ಯೋಜನೆಗಳಡಿ ಕೆಳಕಂಡ ವಿವಿಧ ಕಾರ್ಯಕ್ರಮಗಳಿಗಾಗಿ ಕೇಂದ್ರೀಯ ನೆರವನ್ನು ಮಂಜೂರು ಮಾಡುತ್ತಿದೆ.

ಕ್ರ.ಸಂ	ಕಾರ್ಯಕ್ರಮಗಳು
೧	ವಿಶೇಷ ಕೇಂದ್ರೀಯ ಸಹಾಯಧನ – ಪರಿಶಿಷ್ಟ ವರ್ಗದವರ ನಮೀನು ಅಭಿವೃದ್ಧಿಗೆ ನೀರು ಸಂಗ್ರಹಣಾ ವ್ಯವಸ್ಥೆಗಳ ನಿರ್ಮಾಣ, ಸ್ವಂಕ್ಲರ್ ಸೆಟ್, ಉಳುಮೆ ಎತ್ತು, ಕೃಪೆ ಉಪಕರಣಗಳು, ಸಸ್ಯ ಸಂರಕ್ಷಣಾ ಉಪಕರಣಗಳು, ಟೆಲ್ಲರ್ ವಿತರಣೆ, ತೋಟುಗಾರಿಕೆ ಅಭಿವೃದ್ಧಿಗೆ ಸಹಾಯಧನ, ಪಶು ಸಂಗೋಪನೆ ಅಭಿವೃದ್ಧಿಯಡಿ ಹಸು ಘಟಕ, ಕುರಿ ಮತ್ತು ಹಂದಿ ಘಟಕಗಳ ವಿತರಣೆ ಗ್ರಾಮೀಣ ಕೈಗಾರಿಕೆಗೆ ಸಹಾಯಧನ, ಸ್ವಯಂ ಉದ್ಯೋಗ ತರಬೇತಿ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
೨	ಭಾರತ ಸಂವಿಧಾನ ಅನುಚ್ಛೇದ ೨೭೫(೧) ರ ಅನುದಾನ – ಪರಿಶಿಷ್ಟ ವರ್ಗದವರ ಕಾಲೋನಿಗಳಲ್ಲಿ ಕುಡಿಯುವ ನೀರು. ಸಂಪರ್ಕ ರಸ್ತೆ ಅಭಿವೃದ್ಧಿ, ಚರಂಡಿ ನಿರ್ಮಾಣ, ಸಮುದಾಯ ಭವನ ನಿರ್ಮಾಣ, ಜಮೀನು ಅಭಿವೃದ್ಧಿ, ನೀರಾವರಿ ಸೌಲಭ್ಯ, ಪರಿಶಿಷ್ಟ ವರ್ಗದವರ ಜಮೀನುಗಳಿಗೆ ಸೋಲಾರ್ ತಂತಿಬೇಲಿ ನಿರ್ಮಾಣ. ಇತ್ಯಾದಿ ಕಾರ್ಯಕ್ರಮಗಳನ್ನು ಅನುಷಟಾನಗೊಳಿಸಲಾಗಿದೆ.
೩	ಆದಿವಾಸಿ ಪಂಗಡದವರ ಅಭಿವೃದ್ಧಿ – ಆದಿವಾಸಿ ಜನಾಂಗಕ್ಕೆ ಸೇರಿದ ಕೊರಗ ಮತ್ತು ಜೇನುಕುರುಬ ಪಂಗಡದವರ ಅಭಿವೃದ್ಧಿಗೆ ವಿಶೇಷ ಆರ್ಥಿಕ ನೆರವು ಮತ್ತು ಜನಶ್ರೀ ವಿಮಾ ಯೋಜನೆಯಡಿ ಆದಿವಾಸಿ ಕುಟುಂಬಗಳಿಗೆ ಜೀವ ವಿಮಾ ಸೌಲಭ್ಯ.
೪	ವೃತ್ತಿ ತರಬೇತಿ ಕಾರ್ಯಕ್ರಮ – ಪರಿಶಿಷ್ಟ ವರ್ಗದ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳಿಗೆ ವಿವಿಧ ವೃತ್ತಿಪರ ಕೋಸ್ ್ಗಳಲ್ಲಿ

	ಒಂದು ವರ್ಷದ ತರಬೇತಿ.
೫	ಪರಿಶಿಷ್ಟ ವರ್ಗದ ಆಶ್ರಮಶಾಲೆ / ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ – ಕೇಂದ್ರ ಪುರಸ್ಕೃತ ಯೋಜನೆಯಡಿ ಪರಿಶಿಷ್ಟ ವರ್ಗದ ಆಶ್ರಮಶಾಲೆ / ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೆ ಕೇಂದ್ರ ಸರ್ಕಾರವು ಶೇ. ೫೦ ರಷ್ಟು ಅನುದಾನವನ್ನು ಮಂಜೂರು ಮಾಡುತ್ತದೆ.
೬	ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ – ಮೆಟ್ರಿಕ್ ನಂತರದ ಕೋಸಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರ ವಿದ್ಯಾರ್ಥಿವೇತನ ನೀಡಲಾಗುತ್ತಿದೆ.
೭	ತರಬೇತಿ ಮತ್ತು ಸಂಬಂದಿತ ಯೋಜನೆ – ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ವಿಶೇಷ ತರಬೇತಿ ಕಾರ್ಯಕ್ರಮ.
೮	ಗಿರಿಜನ ಸಂಶೋಧನಾ ಸಂಸ್ಥೆ ಸ್ಥಾಪನೆ – ಕೇಂದ್ರ ಪುರಸ್ಕೃತ ಯೋಜನೆಯಡಿ ಗಿರಿಜನ ಸಂಶೋಧನಾ ಸಂಸ್ಥೆ ಸ್ಥಾಪನೆಗೆ ಅನುದಾನ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೭೦೦ (೨೧೨೮)

ಸದಸ್ಯರ ಹೆಸರು : ಶ್ರೀ ಶಿವಶಂಕರರೆಡ್ಡಿ ಎನ್. ಹೆಚ್ (ಗೌರಿಬಿದನೂರು)

ಉತ್ತರಿಸುವ ಸಚಿವರು : ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕ್ಯಾನ್ಸರ್, ಕಿಡ್ನಿ ತೊಂದರೆ, ನರಗಳ ದೌರ್ಬಲ್ಯ, ಹೃದಯ ರೋಗ ಇತರೆ	ಕ್ಯಾನ್ಸರ್, ಕಿಡ್ನಿ ತೊಂದರೆ, ನರಗಳ ದೌರ್ಬಲ್ಯ. ಹೃದಯ ರೋಗಗಳಿಂದ ಪೀಡಿತರಾಗಿರುವ